ದಿನಾಂಕ 21-03-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

4. ಮಿಸ್ಸಿಂಗ ಪ್ರಕರಣದಲ್ಲಿ ನಾನು ಪಿರ್ಯಾದಿಯ ಪುರವಣಿ ಹೇಳಿಕೆ, ಮೃತನ ತಂದೆ ಮತ್ತು ತಾಯಿ ಗೌರಿಶಂಕರ ಲಕ್ಷ್ಮಣ ಪೋಳ ಮತ್ತು ಸುಮನ್ ಗೌರಿಶಂಕರ ಪೋಳ ರವರ ಹೇಳಿಕೆ ಮತ್ತು ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿದಾರರಾದಂತಹ ಮೋಹನ ಪೋಳ ರವರ ಹೇಳಿಕೆ ಮತ್ತು ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ತದನಂತರ ಸರ್ಕಾರದ ಪರವಾಗಿ ಪಿರ್ಯಾದಿ ನೀಡಿರುತ್ತೇನೆ. ಮಿಸ್ಸಿಂಗ ಪ್ರಕರಣದಲ್ಲಿ ಕಾಣೆಯಾದ ವ್ಯಕ್ತಿ ಶವವಾಗಿ ಪತ್ತೆ ಆದ ಕಾರಣ ತದನಂತರ ಕೊಲೆಯಾದ ಬಗ್ಗೆ ಪ್ರಕರಣ ದಾಖಲಾಗಿದ್ದು ಆದ ಕಾರಣ ಮಿಸ್ಸಿಂಗ ಪ್ರಕರಣದ ತನಿಖೆಯನ್ನು ಸ್ಥಗಿತಗೊಳಿಸಲು ಅನುಮತಿ ನೀಡಬೇಕೆಂದು ಎಸ್.ಪಿ ಬೆಳಗಾವಿ ಇವರಿಗೆ ಪತ್ರ ಮುಖೇನ ಕೋರಿಕೊಂಡಿರುತ್ತೇನೆ.

5. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಮಾನ್ಯ ಎಸ್.ಪಿ ಬೆಳಗಾವಿ ಇವರಿಗೆ ನೀಡಿದ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಆದ ಕಾರಣ ಅದನ್ನು ನಿಪಿಃ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ 4 ಎ ಎಂದು ಗುರುತಿಸಲಾಯಿತು. ಕೊಲೆ ಪ್ರಕರಣದಲ್ಲಿ ತನಿಖಾಧಿಕಾರಿಗಳು ನನ್ನನ್ನು ವಿಚಾರಣೆ ಮಾಡಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಆರೋಪಿಯಾದಂತಹ ಸತೀಶ ಕ್ಷೀರಸಾಗರ ಇತನನ್ನು ನೋಡಿದರೆ ಗುರುತಿಸಬಲ್ಲೆ. ಈ ದಿನ ನ್ಯಾಯಾಲಯದ ಮುಂದೆ ಹಾಜರಿದ್ದಂತಹ 1 ಮತ್ತು 2 ನೇ ಆರೋಪಿತರ ಪೈಕಿ 1 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಶ್ರೀ.ಬಿ.ಜೆ.ಜಿ. ವಕೀಲರಿಂದ 3 ನೇ ಆರೋಪಿತನ ಪರವಾಗಿ**

ಚಾಸಾಃ 10 ಅಜಿತ ಗೌರಿಶಂಕರ ಪೋಳ ಇವರು ದಿಃ 01.04.2019 ರಂದು ಮುಂಜಾನೆ 8.15 ಗಂಟೆ ಸುಮಾರಿಗೆ ತನ್ನ ಅಣ್ಣ ಅರವಿಂದ ಗೌರಿಶಂಕರ ಪೋಳ ಕಾಣೆಯಾಗಿರುತ್ತಾರೆ ಎಂದು ದೂರು ಕೊಡಲು ಬಂದಿರುತ್ತಾರೆ ಎಂದರೆ ಸರಿ. ಕಾಣೆಯಾದ ಪಿರ್ಯಾದಿಯಲ್ಲಿ ಅರವಿಂದ ಗೌರಿಶಂಕರ ಪೋಳ ಇತನನ್ನು ಸತೀಶ ಕ್ಷೀರಸಾಗರ ಕರೆದುಕೊಂಡು ಹೋಗಿರುತ್ತಾನೆ ಎಂದು ನಮೂದು ಇರುತ್ತದೆ. ಯಾರೊಂದಿಗೆ ಅರವಿಂದ ಪೋಳ ಹೋಗಿರುತ್ತಾನೆ ಎಂದು ಮಾಹಿತಿ ಗೊತ್ತಾದ ನಂತರ ಕಾಣೆಯಾದ ಬಗ್ಗೆ ದೂರು ದಾಖಲಿಸಿಕೊಳ್ಳುವ ಜರೂರತ ಇರಲಿಲ್ಲ ಎಂದರೆ ಸರಿಯಲ್ಲ.

2. ಪಿರ್ಯಾದಿ ದಾಖಲಿಸಿಕೊಳ್ಳುವ ಮುಂಚೆ ಸತೀಶ ಕ್ಷೀರಸಾಗರ ಇತನನ್ನು ವಿಚಾರಣೆ ಮಾಡಿರುವುದಿಲ್ಲ. ತನ್ನ ಅಣ್ಣ ಕಾಣೆಯಾದ ಬಗ್ಗೆ ದೂರು ಕೊಡಲು ಬಂದಾಗ ಚಾಸಾಃ10 ರವರು ಸತೀಶ ಕ್ಷೀರಸಾಗರ ಇತನ ಪೋನ ನಂಬರನನ್ನು ನನಗೆ ಕೊಟ್ಟಿರುವುದಿಲ್ಲ. ಯಾವ ಮೋಟರಸೈಕಲ ಮೇಲೆ ಹೋಗಿರುತ್ತಾನೆ ಅದರ ಸಂಖ್ಯೆ ಯಾವುದು ಎಂದು ಕಾಣೆಯಾದ ಪಿರ್ಯಾದಿಯಲ್ಲಿ ನಮೂದು ಮಾಡಿರುವುದಿಲ್ಲ. ಕಾಣೆಯಾದ ಅರವಿಂದ ಗೌರಿಶಂಕರ ಪೋಳರವರ ತಂದೆ ತಾಯಿ ಮತ್ತು ಸಂಬಂಧಿಕರ ಹೇಳಿಕೆ ತೆಗೆದುಕೊಳ್ಳುವ ಹೊತ್ತಿಗೆ ಆ ದಿನ ಸಾಯಂಕಾಲ ಆಗಿತ್ತು. ನಮ್ಮ ಪೋಲಿಸ ಠಾಣೆಯಿಂದ ವೃತ್ತ ಕಚೇರಿಯು ಒಂದು ಕಿಲೋಮೀಟರ ದೂರದಲ್ಲಿ ಇರುತ್ತದೆ.

3. ಕಾಣೆಯಾದ ದೂರು ದಾಖಲಾದ ನಂತರ ಶೀಘ್ರ ವರದಿಯನ್ನು ನಮ್ಮ ವೃತ್ತ ಕಚೇರಿಗೆ ಮಾಹಿತಿಯನ್ನು ನೀಡಿರುತ್ತೇನೆ ಆಗ ಸಮಯ ಮುಂಜಾನೆ 8.45 ಗಂಟೆ ಆಗಿರಬಹುದು. ಕಾಣೆಯಾದ ದೂರು ದಾಖಲು ಮಾಡಿಕೊಂಡ ನಂತರ ಆ ದಿನ ಮುಂಜಾನೆ 10.30 ಗಂಟೆಗೆ ಸತೀಶ ಕ್ಷೀರಸಾಗರ ಇತನನ್ನು ಠಾಣೆಗೆ ಕರೆಸಿರುತ್ತೇನೆ. ಸತೀಶ ಕ್ಷೀರಸಾಗರ ನೀಡಿದ ಹೇಳಿಕೆಯನ್ನು ತೆಗೆದುಕೊಂಡಿರುತ್ತೇನೆ. ಸತೀಶ ಕ್ಷೀರಸಾಗರ ಇತನನ್ನು ವಿಚಾರಣೆ ಮಾಡಿದಾಗ ಕಾಣೆಯಾದ

ಅರವಿಂದ ಪೋಳ ಇವರ ಸಂಬಂಧಿಕರು ಠಾಣೆಯಲ್ಲಿ ಹಾಜರಿದ್ದರು. ಸತೀಶ ಕ್ಷೀರಸಾಗರವರಿಂದ ಹೇಳಿಕೆ ಪಡೆದುಕೊಂಡ ನಂತರ ಕಾಣೆಯಾದ ಅರವಿಂದ ಪೋಳ ಇವರ ಸಂಬಂಧಿಕರು ದೂರು ಕೊಡಲು ಯಾರೂ ಮುಂದೆ ಬಂದಿರಲಿಲ್ಲ.

4. ಅರವಿಂದ ಪೋಳ ಇವರ ಸಂಬಂಧಿಕರು ಆ ಸಂದರ್ಭದಲ್ಲಿ ದೂರು ಕೊಡಲು ಮುಂದೆ ಬರದೇ ಇರುವ ವಿಷಯವನ್ನು ಡಿ.ವೈ.ಎಸ್.ಪಿ ಮತ್ತು ಸಿ.ಪಿ.ಐ ರವರಿಗೆ ಮಾಹಿತಿ ನೀಡಿರುತ್ತೇನೆ. ನಿಪಿಃ1 ನಮ್ಮ ಠಾಣೆಯಲ್ಲಿಯೇ ತಯಾರಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಸರ್ಕಾರದ ಪರವಾಗಿ ನಾನೇ ದೂರನ್ನು ನೀಡಿರುತ್ತೇನೆ. ಕಾಣೆಯಾದ ದೂರನ್ನು ನಮ್ಮ ಠಾಣೆಯಲ್ಲಿಯೇ ತಯಾರು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ವ್ಯಕ್ತಿ ಕಾಣೆಯಾಗಿರುತ್ತಾನೆ ಎನ್ನುವ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿದ್ದು ಅದರಲ್ಲಿ ಸತೀಶ ಕ್ಷೀರಸಾಗರವರು ಹೇಳಿದ ವಿಷಯವನ್ನು ಸಾಕ್ಷಿದಾರರ ಪುರವಣಿ ಹೇಳಿಕೆಯಲ್ಲಿ ನಮೂದು ಮಾಡಿರುತ್ತೇನೆ ಎಂದರೆ ಸರಿ.

5. ಚಾಸಾಃ10 ಠಾಣೆಗೆ ಹಾಜರಾಗಿ ತನ್ನ ಅಣ್ಣ ಕಾಣೆಯಾಗಿರುತ್ತಾನೆ ಎಂದು ದೂರು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸತೀಶ ಕ್ಷೀರಸಾಗರ ಇತನ ಹೇಳಿಕೆಯು ಈ ಪ್ರಕರಣದ ಕಡತದಲ್ಲಿ ಹಾಗೂ ವಕ್ತಿಯು ಕಾಣೆಯಾದ ಬಗ್ಗೆ ದಾಖಲಸಿಕೊಂಡ ಪ್ರಕರಣದಲ್ಲಿಯೂ ಸಹ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸರ್ಕಾರದ ಪರವಾಗಿ ಪಿರ್ಯಾದಿಯನ್ನು ಕೊಡುವ ಮುಂಚೆ ಸತೀಶ ಕ್ಷೀರಸಾಗರ ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸತೀಶ ಕ್ಷೀರಸಾಗರವರ ಹೇಳಿಕೆಯಲ್ಲಿ ವ್ಯಕ್ತಿ ಕಾಣೆಯಾದ ಬಗ್ಗೆ ದಾಖಲಾದ ಅಪರಾಧ ಸಂಖ್ಯೆ 14/2019 ನಮೂದು ಇರುವುದಿಲ್ಲ ಎಂದರೆ ಸರಿ.

6. ಸತೀಶ ಕ್ಷೀರಸಾಗರವರ ಹೇಳಿಕೆಯ ಮೇಲೆ ಆತನ ಸಹಿಯನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ನಾನು ಸರ್ಕಾರದ ಪರವಾಗಿ ದೂರು ನೀಡಿದ ನಂತರ ನಮ್ಮ ಮೇಲಾಧಿಕಾರಿಗಳ ಆದೇಶದಂತೆ ಸತೀಶ ಕ್ಷೀರಸಾಗರ ಇತನ ಹೇಳಿಕೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 31.03.2019 ರಂದು ಮಧ್ಯಾಹ್ನ 12.00 ಗಂಟೆಗೆ ಕಾಣೆಯಾದ ವ್ಯಕ್ತಿ ಸತೀಶ ಕ್ಷೀರಸಾಗರ ಇತನೊಂದಿಗೆ ಮೋಟರಸೈಕಲ ಮೇಲೆ ಹೋದನು ಎಂದು ಚಾಸಾಃ 10 ರವರು ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ನಿಪಿಃ 1 ವ್ಯಕ್ತಿ ಕಾಣೆಯಾದ ದೂರನ್ನು ಹಾಗೂ ನಾನು ನೀಡಿದ ನಿಪಿಃ3 ಪಿರ್ಯಾದಿಯನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 01.04.2019 ರಂದು ಸಾಯಂಕಾಲ 4.00 ಗಂಟೆಗೆ ಚಾಸಾಃ32 ರವರು ಠಾಣೆಗೆ ಬಂದಿದ್ದರು.

7. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರು ಈ ಪ್ರಕರಣಕ್ಕೆ ಸಂಬಂಧ ಇರದೇ ಇದ್ದರೂ ಸಹ ಅವರ ವಿರುದ್ಧ ಒಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಶ್ರೀ.ಬಿ.ಎಸ್.ಕೆ ಮತ್ತು ಶ್ರೀ.ಎಲ್.ಜಿ.ಎನ್ ವಕೀಲರಿಂದ 1 ಮತ್ತು 2 ನೇ ಆರೋಪಿತನ ಪರವಾಗಿ**

3 ನೇ ಆರೋಪಿತನ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 1 ಮತ್ತು 2 ನೇ ಆರೋಪಿತರ ಪರ ವಕೀಲರು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಬೆಳಗಾವಿ.